359

## ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ದೇವೇಂದ್ರ ರೆಡ್ಡಿ ತಂದೆ ದಿ॥ ಎಂ.ವೆಂಕಟರೆಡ್ಡಿ ಬಳ್ಳಾರಿ ತಾ ॥ | 1. ಶ್ರೀ ಆರ್.ರಮೇಶ ಬಾಬು ತಂದೆ ರಾಘವೇಂದ್ರ ರೆಡ್ಡಿ ಬಳ್ಳಾರಿ ತಾ॥ |

**ವಿಷಯ**:-ಬಳ್ಳಾರಿ ತಾಲ್ಲೂಕಿನ **ಕೊಳಗಲ್ಲು** ಗ್ರಾಮದ ಜಮೀನು ಸ.ನಂ: 449/ಸಿ/1/ಸಿ14 ವಿಸ್ತೀರ್ಣ:4.49 ಎಕರೆ ಜಮೀನಿಗೆ ಸಂಬಂಧಿಸಿದಂತೆ ತಕರಾರು ವಿಚಾರಣೆ ಕುರಿತು.

*****************

ಬಳ್ಳಾರಿ ತಾಲ್ಲೂಕಿನ **ಕೊಳಗಲ್ಲು** ಗ್ರಾಮದ ಜಮೀನು ಸ.ನಂ: 449/ಸಿ/1/ಸಿ14 ವಿಸ್ತೀರ್ಣ:4.49 ಎಕರೆ ಶ್ರೀ ಎನ್.ಪಿ ಉದ್ದಾನ ರೆಡ್ಡಿ ತಂದೆ ಎನ್.ಪಿ ಕೇಶವ ರೆಡ್ಡಿ, ಬಳ್ಳಾರಿ ಇವರ ಕ್ರಯ ಪತ್ರ ಸಂಖ್ಯೆ:BLY-1-00454/2013-14 ದಿನಾಂಕ:15-04-2013ರನ್ವಯ ಶ್ರೀ ಎಂ. ದೇವೇಂದ್ರ ರೆಡ್ಡಿ ತಂದೆ ಎಂ. ವೆಂಕಟ ರೆಡ್ಡಿ ಇವರಿಗೆ ಮಾರಾಟ ಮಾಡಿರುತ್ತಾರೆ. ಅದರಂತೆ ಹಕ್ಕು ಬದಲಾವಣೆ ಎಂ.ಆರ್. ನಂ. ಹೆಚ್.192/2012-13 ರಂತೆ ನಮೂನೆ-21ರ ನೋಟಿಸು ಹೊರಡಿಸಿ ಸಂಬಂಧ ಪಟ್ಟವರಿಗೆ ಜಾರಿ ಮಾಡಲಾಗಿರುತ್ತದೆ. ನಿಗದಿತ ಅವದಿಯಲ್ಲಿ ಶ್ರೀ. ಆರ್. ರಮೇಶ್ ಬಾಬು ತಂದೆ ರಾಘವೇಂದ್ರ ರೆಡ್ಡಿ ಇವರು ತಕರಾರು ಅರ್ಜಿಸಲ್ಲಿಸಿ ಸದ್ರಿ ಜಮೀನನ್ನು ಹಕ್ಕು ಬದಲಾವಣೆ ಮಾಡಬಾರದೆಂದು ವಿನಂತಿಸಿ ಕೊಂಡಿರುತ್ತಾಋಎ ಸದ್ರಿ ಹಕ್ಕು ಬದಲಾವಣೆಯನ್ನು ವಿವಾದಸ್ಪದ ಪ್ರಕಾರಣವೆಂದು ಗೈರು ಮಂಜೂರು ಮಾಡಿ ಕಡತವನ್ನು ಈ ಕಾರ್ಯಾಲಯಕ್ಕೆ ಬೀಡಿರುತ್ತಾರೆ.

ದಿನಾಂಕ:05-08-2013, 21-10-2013, 25-11-2013, 06-01-2014, 05-03-2014, 27-10-2014, 03-11-2014 ಮತ್ತು 27-04-2015ರಂದು ವಿಚಾರಣೆ ನಡೆಸಲಾಗಿ ವಿಚಾರಣೆಗೆ ತಕರಾರು ದಾರರಾದ ಶ್ರೀ. ಆರ್. ರಮೇಶ್ ಬಾಭು ತಂದೆ ರಾಘವೇಂಧ್ರ ರೆಡ್ಡಿ ಇವರಿಗೆ ಶ್ರೀ ಎನ್.ಪಿ ಉದ್ದಾನ ರೆಡ್ಡಿ ತಂದೆ ಎನ್.ಪಿ ಕೇಶವ ರೆಡ್ಡಿ ಮಾರಾಟ ಮಾಡಿರುತ್ತಾರೆ. ನನಗೆ ಹಾಗೂ ಶ್ರೀ ಎನ್.ಪಿ ಉದ್ದಾನ ರೆಡ್ಡಿ ಇವರಿಗೆ ಹಣಕಾಸಿನ ವ್ಯವಹಾರ ಇರುವುದರಿಂದ ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ಮನವಿ ಸಲ್ಲಿಸಿರುತ್ತೇನೆ ಈಗ ನಾವುಗಳು ಹಿರಿಯರ ಸಮಕ್ಷಮದಲ್ಲಿ ಇರುವ ಸಮಸ್ಯೆಯನ್ನು ಬಗೆಹರಿಸಿ ಕೊಂಡಿರುತ್ತೇವೆ, ಹಾಗೂ ನಾನು ನೀಡಿದ ತಕರಾರರು ಮನವಿಯ ಅರ್ಜಿ ಹಿಂದಕ್ಕೆ ಪಡೆಯುತ್ತಾ ಸದ್ರಿ ಜಮೀನಿನ ಹಕ್ಕು ಬದಲಾವಣೆಯನ್ನು ಮಾಡಲು ನನನ್ ಆಕ್ಷೆಪಣೆ ಇರುವುದಿಲ್ಲವೆಂದು ಅಫ್‌ಡೆವಿಟ್ ನೀಡಿರುತ್ತಾರೆ.

ಶ್ರೀ ಎಂ.ದೇವೇಂದ್ರ ತಂದೆ ಲೇಟ್ ಎಂ.ವೆಂಕಟರೆಡ್ಡಿ ಖರೀದಾರರ ಇವರು ಕ್ರಯ ಪತ್ರದಂತೆ ಖರೀದಿ ಮಾಡಿರುತ್ತೇವೆ. ಅದರಂತೆ ಹಕು ಬದಲಾವಣೆ ಮಾಡಲು ವಿನಂತಿಸಿ ಕೊಂಡಿರುತ್ತಾರೆ.

ವಾದಿ ಮತ್ತು ಪತ್ರಿವಾದಿಗಳ ಹೇಳಿಕೆಗಳನ್ನು ಅಲಿಸಲಾಗಿ ಪ್ರಸ್ತಾಪಿತ ಜಮೀನು ಮಾಲಿಕರಾದ ಶ್ರೀ. ಎನ್.ಪಿ ಉದ್ದಾನ ರೆಡ್ಡಿ ತಂದೆ ಎನ್.ಪಿ ಕೇಶವ ರೆಡ್ಡಿ ಮಾಲಿಕರಾಗಿದ್ದು ಇವರಿಂದ ಕ್ರಯ ಪತ್ರ ಸಂಖ್ಯೆ: BLY -1-00454/2013-14 ದಿನಾಂಕ:15-04-2013 ಪ್ರಕಾರ ಶ್ರೀ. ಎಂ.ದೇವೇಂದ್ರ ರೆಡ್ಡಿ ತಂಧೆ ಎಂ.ವೆಂಕಟರೆಡ್ಡಿ ಇವರು ರೂ:22,46,00/- (ಇಪ್ಪತ್ತೆರಡು ಲಕ್ಷ ನಲವತ್ತಾರು ಸಾವಿರಕ್ಕೆ ಖರೀದಿ ಮಾಡಿರುತ್ತಾರೆ. ಸದ್ರಿ ಹಣಯಾವ ಮೂಲದಿಂದ ಬಂದಿರುತ್ತದೆ. ಎಂಬುದರ ಬಗ್ಗೆ ದಾಖಲೆಗಳನ್ನು ಖರೀದಿದಾರರು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಕರ್ನಾಟಕ ಭೂಸುದಾರಣೆ ಕಾಯ್ದೆ 1961ರ ಕಲಂ 79ಎರ) ಸದ್ರಿ ದಾಖಲೆಗಳನ್ನು ಪರಿಶೀಲಿಸಲಾಗಿ ವಿವರ ಈ ಕೆಳಗಿನಂತ್ತಿದೆ.

ವಾದಿಗಳಿಗೆ ಬಳ್ಳಾರಿ ಜಿಲ್ಲಾ ಸಿರುಗುಪ್ಪ ತಾ॥ ಅಗಸನೂರು ಗ್ರಾಮದ ಪಿತ್ರಾರ್ಜಿತ ಮೂಲದಿಂದ ಕೃಷಿ ಜಮೀನು ಸರ್ವೆ ನಂ 143/ಡಿ2 ವಿಸ್ತೀರ್ಣ 4.52 ಸರ್ವೆ ನಂ:366/13/3 ವಿಸ್ತೀರ್ಣ:1.00 ವಿರಾಮ ಜಮೀನಗಳು ಹಾಗೂ ಡಿಸೆಂಬರ್ 09ರಲ್ಲಿ ವಾದಿಯ ಹೆಸರಿನಲ್ಲಿದ್ದ ಪಿತ್ರಾರ್ಜಿತ ಕೃಷಿ ಜಮೀನುಗಳ ಸರ್ವೆ ನಂ 116/ಸಿ1, ಸರ್ವೆ ನಂ: 177/*/* ಮತ್ತು 190/*/ಹೆಚ್ ಒಟ್ಟು 24.63 ಎಕರೆ ಭೂಮಿಯನ್ನು ವಿಕ್ರಯಿಸಿ ಬಂದ ರೂ:16,76,020/- ಹಾಗೂ ವಾದಿ ಕುಂಟುಬಂದ ಉಳಿತಾಯದ ಪ್ರಗತಿ ಗ್ರಾಮೀಣ ಬ್ಯಾಂಕ್‌ನಲ್ಲಿದ್ದ ಫಿಕ್ಸೆಡ್ ಡಿಪಾಸಿಟ್ ರೂ:57,8152/- ಒಟ್ಟು ಉಳಿತಾಯ ರೂ:22,54,172/- ಆಗಿರುತ್ತದೆ. ಹಾಗೂ ವಾದಿಯ ಹಿಂದಿನ 5 ವರ್ಷದಲ್ಲಿ ಯಾವುದೇ ಆದಾಯ ತೆರಿಗೆ ಪಾವತಿಸಿರುವುದಿಲ್ಲ ಈ ಎಲ್ಲಾ ದಾಖಲೆಗಳ ಆದಾರದ ನೇರೆಗೆ ವಾದಿಯು ಸದ್ರಿ ಜಮೀನು ಖರೀದಿಸಿದಲ್ಲಿ ಕರ್ನಾಟಕ ಭೂಸುದಾರಣೆ ಕಾಯ್ದೆ 1961 ಕಲಂ 79/ಎರ ಉಲ್ಲಂಘನೆಯಾಗಿರುವುದು ಕಂಡ ಬಂದಿರುವುದಿಲ್ಲ ಕಾರಣ ಈ ಕೆಳಗಿನಂತೆ ಆದೇಶ

**-::ಆದೇಶ::-**

ಸಂ/ಕಂ/ವಿವಾದ/07/2013-14 ದಿನಾಂಕ:16 /05/2015

ಪ್ರಸ್ತಾವನೆಯಲಿ ವಿವರಿಸಿದಂತೆ ಪ್ರಕರಣದಲ್ಲಿ ಪತ್ರಿವಾದಿಯ ತಕರಾರು ಅರ್ಜಿಯನ್ನು ಹಿಂದಿಕ್ಕೆ ಪಡೆದಿರುತ್ತಾರೆ, ಹಾಗೂ ಖರೀದಿದಾರರ ಮೂಲತಃ ಕೃಷಿ ಕುಟುಂಬಕ್ಕರ ಸೇರಿದ ವ್ಯಕ್ತಿಗಳಾಗಿದ್ದು ಕೃಷಿ ಜಮೀನಿನ ಮಾರಾಟದಿಂದ ಹಾಗೂ ಕೃಷಿ ಉತ್ಪನ್ನಗಳ ಮಾರಾಟದ ಆದಾಯ ದಿಂದ ಕೊಳಗಲ್ಲು ಗ್ರಾಮದ ಸರ್ವೆ ನಂ: 449/ಸಿ/1/ಸಿ14 ವಿಸ್ತೀರ್ಣ:4.00 ಎಕರೆ ಜಮೀನನ್ನು ಖರೀದಿಸಿರುವುದು ವಿಚಾರಣೆ ಹಾಗೂ ದಾಖಲೆಗಳಿಂದ ಧೃಡಪಟ್ಟಿರುವುದರಿಂದ ಪ್ರಸ್ತಾಪಿತ ಜಮೀನಿನ ವಾದಿಗಳಾದ ಶ್ರೀ ದೇವೇಂದ್ರ ರೆಡ್ಡಿ ತಂದೆ ಲೇಟ್ ಎಂ. ವೆಂಕಟ ರೆಡ್ಡಿ, ಬಳ್ಳಾರಿ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಸಲಾಗಿದೆ.

16/5

ತಹಶೀಲ್ದಾರರು, ಬಳ್ಳಾರಿ
Tahsildar, Bellary.

ಪ್ರತಿಯನ್ನು:1)ವಾದಿ ಮತ್ತು ಪ್ರತಿವಾದಿಗಳಿಗೆ ನ್ಯಾಯವಾದಿಗಳ ಮುಖಾಂತರ
2)ಶಿರಸ್ತೇದಾರರು, ಗಣಕೀಕರಣ ಕೇಂದ್ರ ಇವರಿಗೆ ಸೂಕ್ತ ಕ್ರಮಕ್ಕಾಗಿ
3)ಆದೇಶದ ಕಡತಕ್ಕೆ